**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ . ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 1251/2021**

ಸರ್ಕಾರದ ಪರವಾಗಿ
ಕುಂದಾಪುರ ಸಂಚಾರ ಠಾಣಾ ಪೋಲಿಸರು --- ಪಿರ್ಯಾದಿದಾರರು

ಕೆ. ದಿನೇಶ್ ಕುಮಾರ್, 45 ವರ್ಷ,
ತಂದೆಃ ರಾಮ ಪೂಜಾರಿ,
ವಾಸಃ ಕೆರೆಮನೆ, ಕೋಣಿ,
ಕುಂದಾಪುರ ತಾಲೂಕು. --- ಆರೋಪಿ

**ಃಆಪಾದನೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆಃ**

ದಿ. 18.02.2021 ರಂದು ರಾತ್ರಿ ಸುಮಾರು 9.30 ಗಂಟೆಗೆ ಕುಂದಾಪುರ ತಾಲೂಕು ಕೋಟೇಶವರ ಗ್ರಾಮದ ಕೊಟೇಶ್ವರ ಹಾಲಾಡಿ ರಸ್ತೆಯಲ್ಲಿ ಆಪಾದಿತರಾದ ನೀವು ನಿಮ್ಮ ಬಾಬ್ತು ಕೆಎ 20 ಡಿ 7017 ನೇ ನಂಬ್ರದ ಎಪಿಎಂ ಕಂಪನಿಯ ಬಸ್ಸನ್ನು ಕೊಟೇಶ್ವರ ಕಡೆಯಿಂದ ಹಾಲಾಡಿ ಕಡೆಗೆ ರಸ್ತೆಯಲ್ಲಿ ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ರಸ್ತೆಯ ತೀರ ಬಲಬದಿಯಲ್ಲಿ ಚಲಾಯಿಸಿಕೊಂಡು ಹೋಗಿ ಪ್ರೀತಮ್ ಬಾರ್ ಸಮೀಪ ರಸ್ತೆಯಲ್ಲಿ ಎದುರಿನಿಂದ ಅಂದರೆ ಹಾಲಾಡಿ ಕಡೆಯಿಂದ ಕೊಟೇಶ್ವರ ಕಡೆಗೆ ಪ್ರವೀಣ್ ಎಂಬವರು ಸವಾರಿ ಮಾಡಿಕೊಂಡು ಬರುತ್ತಿದ್ದ ಕೆಎ 20 ಇಬಿ 9759 ನೇ ನಂಬ್ರದ ಮೋಟಾರ್ ಸೈಕಲ್ ಗೆ ಎದುರಿನಿಂದ ಡಿಕ್ಕಿ ಹೊಡೆದ ಪರಿಣಾಮ ಮೋಟಾರ್ ಸೈಕಲ್ ಸವಾರ ಮೋಟಾರ್ ಸೈಕಲ್ ಸಮೇತ ರಸ್ತೆಗೆ ಬಿದ್ದಿದ್ದುಕ ಪರಿಣಾಮವಾಗಿ ಪ್ರವೀಣ್ ರವರ ತಲೆಗೆ ಗಂಭೀರ ರಕ್ತಗಾಯವಾಗಿ ಪ್ರಜ್ಞೆ ಕಳೆದುಕೊಂಡವರನುನ ಚಿಕಿತ್ಸೆಗಾಗಿ ಕೊಟೇಶ್ವರ ಎನ್ ಆರ್ ಆಚಾರ್ಯ ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304 (ಎ)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ :10.01.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :1251/2021**

ಫಿರ್ಯಾದುದಾರರು : ಸರಕಾರದ ಪರವಾಗಿ ಕುಂದಾಪುರ ಸಂಚಾರಿ ಠಾಣಾ ಪೋಲಿಸರು,

- ವಿರುದ್ಧ-

ಆರೋಪಿ : ಕೆ. ದಿನೇಶ್ ಕುಮಾರ್, ತಂದೆಃ ರಾಮ ಪೂಜಾರಿ,

**1.** ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ಆಪಾದನೆಯ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?

ಉ.

**2.** ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.